# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಮಹೇಶ್ ಬಾಬು.ಎಂ.ಪಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತು ಶ್ರೀ ಮಹದೇವು.ಎಂ ಕಾರ್ಯದರ್ಶಿ, ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ **D.O.No. Compt/MYS/ 380/2017/DRE-2, ದಿನಾಂಕ: 22.03.2018.**

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 02.03.2018 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ದೂರುದಾರರಾದ ಶ್ರೀ.ಎಂ.ಬಿ. ಗುರುಪ್ರಸಾದ್, ಶೆಟ್ಟಿಹಳ್ಳಿ ನಿವಾಸಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ರವರು ತಮ್ಮ ದೂರಿನಲ್ಲಿ (1) ಶ್ರೀ ಮಹೇಶ್ ಬಾಬು ಎಂ.ಪಿ ಪಿಡಿಓ, ಮತ್ತು (2) ಶ್ರೀ ಮಹದೇವು ಎಂ. ಕಾರ್ಯದರ್ಶಿ, ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಮಳವಳ್ಳಿ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1 ರಿಂದ 2 ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:–**

ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಮಾಗನೂರು ಗ್ರಾಮದ ಸರ್ವೆ ನಂ. 198/2 ವಿಸ್ತೀರ್ಣ 2 ಎಕರೆ 3 ಗುಂಟೆ ಸ್ವತ್ತು ತನ್ನ ಅಣ್ಣ ಎಂ. ಬಿ. ಜಗದೀಶ ಬಿನ್ ಲೇಟ್ ಎಂ.ಬಿ. ಬಸವರಾಜಪ್ಪನವರು ದಿ:15.5.1993 ರಂದು ಸದರಿ ಗ್ರಾಮದ ಎಂ.ಬಿ. ಮದೇವಪ್ಪ ಬಿನ್ ಲೇಟ್ ಎಂ.ಸಿ ಬಸವಪ್ಪನವರಿಂದ ಕ್ರಯಕ್ಕೆ ಪಡೆದಿದ್ದು, ತನ್ನ ಅಣ್ಣ ಸದರಿ ಜಮೀನ್ನು ಅನ್ಯಕ್ರಾಂತ್ಯ ಮಾಡಿಸಿರುತ್ತಾರೆ. ತನ್ನ ಅಣ್ಣ ಮೃತ ಪಟ್ಟ ನಂತರ ಮರಣಶಾಸನ ಬರೆದು ದಿ:29.3.2014 ರಂದು ಮೃತ ಪಟ್ಟಿರುತ್ತಾರೆ. ಅದರಂತೆ ಸದರಿ ಸ್ವತ್ತು ತನ್ನ ಹೆಸರಿಗೆ ಖಾತೆಯಾಗಿ ಪಹಣಿ ಪತ್ರಿಕೆಯು ಸಹ ಬಂದಿರುತ್ತದೆ. ದಿನಾಂಕ:12.5.2015 ರಂದು ಎದುರುದಾರರ ಕಛೇರಿಗೆ ಪೂರಕ ದಾಖಲೆಗಳನ್ನು ಸಲ್ಲಿಸಿ ಗಣಕೀಕೃತ ಖಾತೆಗೆ (ಇ ಖಾತೆಗೆ) ಮಾಡಿಸಿಕೊಡುವಂತ ಅರ್ಜಿ ಸಲ್ಲಿಸಿದ್ದು ಆದರೆ ಎದುರುದಾರರು ಅರ್ಜಿ ಸಲ್ಲಿಸಿ ಒಂದು ವರ್ಷ 9 ತಿಂಗಳು ಕಳದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಈ ಬಗ್ಗೆ ಎದುರುದಾರರನ್ನು ಕೇಳಲಾಗಿ ಯಾವುದೇ ಸರಿಯಾದ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ದೂರಿನ ಜೊತೆ ಕ್ರಮ ಪತ್ರದ ಜೆರಾಕ್ಸ್ ಪ್ರತಿ, ಮರಣಶಾಸನ ಪತ್ರ, ಪಹಣಿ ಪತ್ರಿಕೆ, ಅರ್ಜಿಯ ಪ್ರತಿ ಮ್ಯೂಟೇಶನ್ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

ಸದರಿ ದೂರಿಗೆ ಸಂಬಂಧಪಟ್ಟಂತೆ ಎದುರುದಾರರಿಂದ ಆಕ್ಷೇಪಣೆ ಕೋರಲಾಗಿ 1 ಮತ್ತು 2 ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ನೀಡಲಾದ ಅರ್ಜಿಗೆ ಸಂಬಂಧಪಟ್ಟಂತೆ ದಿ: 17.3.2016 ರಂದು ಸದರಿ ಸ್ವತ್ತನ್ನು ಅಳತೆ ಮಾಡಲು ಸಭೆಯ ನಿರ್ಣಯದಂತೆ ಹಣ ಪಾವತಿಸಲು ಕಛೇರಿಗೆ ಕಳುಹಿಸಿಕೊಟ್ಟಿದ್ದು, ಈ ಬಗ್ಗೆ ಅಳತೆ ಕೆಲಸ ಪೂರೈಸಿ ನೀಡಿರುವ ಹಿಂಬರಹವನ್ನು ಸ್ವತಃ ಪಂಚಾಯತಿಗೆ

ಸಲ್ಲಿಸಿರುತ್ತಾರೆ. ಶ್ರೀ ಕೆಂಪರಾಜು ಮಾಜಿ ಅಧ್ಯಕ್ಷರು, ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಮಗ ತಮ್ಮ ಕಚೇರಿಗೆ ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ ಜಮೀನನ್ನು ಅಕ್ರಮವಾಗಿ ಪೋಡಿ ಮಾಡಿಸಿಕೊಂಡಿರುವ ಬಗ್ಗೆ ದೂರನ್ನು ನೀಡಿ ಈ ಸ್ವತ್ತಿನಲ್ಲಿ ಖಾತಾ ನೋಂದಣಿ ಮಾಡದಂತೆ ದಾನ ಪತ್ರದ ನಕಲನ್ನು ಲಗತ್ತಿಸಿ ತಕರಾರು ನೀಡಿರುತ್ತಾರೆ. ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ 5 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ 2 ಗುಂಟೆ ಜಾಗವನ್ನು ಪೋಡಿ ಮಾಡಿಸಿಕೊಂಡು ಖಾತೆ ಮಾಡಿಕೊಡುವಂತೆ ಕೋರಿರುವ ಬಗ್ಗೆ ದಿ: 7.12.2016 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಅರ್ಜಿಯನ್ನು ಪರಿಗಣಿಸಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪತ್ರದಲ್ಲಿ ಅಕ್ರಮವಗಿ ಪೋಡಿ ಮಾಡಿಕೊಂಡಿರುವುದನ್ನು ರದ್ದು ಪಡಿಸಿ, ಶಿಕ್ಷಣ ಇಲಾಖೆಗೆ ಸೇರಿದ ಎಲ್ಲಾ ಆಸ್ತಿಯ ಸರಿಯಾಗುವವರೆಗೆ ಖಾತಾ ವಗೆರಿ ಮಾಡಬಾರದು ಎಂದು ದೂರುದಾರರ ಈ ಸ್ವತ್ತಿನ ಖಾತೆ ನೋಂದಣಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ನಿರ್ಣಯಿಸಲಾಗಿರುತ್ತದೆ ಎಂದು ಹೇಳಿ ಈ ಬಗ್ಗೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಮರುಉತ್ತರವನ್ನು ಕೇಳಲಾಗಿ ದೂರುದಾರರು ಎದುರುದಾರರ ಆಕ್ಷೇಪಣೆಯಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

ದೂರುದಾರರ ದೂರು, ದಾಖಲೆಗಳು, ಎದುರುದಾರರ ಆಕ್ಷೇಪಣೆ, ದಾಖಲೆಗಳನ್ನು ಹಾಗೂ ದೂರುದಾರರ ಪ್ರತ್ಯುತ್ತರ ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ದೂರುದಾರರು ತಮ್ಮ ದೂರಿನಲ್ಲಿ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಮಾಗನೂರು ಗ್ರಾಮದ ಸರ್ವೆ ನಂ. 198/2 ವಿಸ್ತೀರ್ಣ 2 ಎಕರೆ 3 ಗುಂಟೆ ಸ್ವತ್ತು ತನ್ನ ಅಣ್ಣ ಎಂ. ಬಿ. ಜಗದೀಶ ಬಿನ್ ಲೇಟ್ ಎಂ. ಬಿ. ಬಸವರಾಜಪ್ಪನವರು ದಿ: 15.05.1993 ರಂದು ಸದರಿ ಗ್ರಾಮದ ಎಂ.ಬಿ.ಮದೇವಪ್ಪ ಬಿನ್ ಲೇಟ್ ಎಂ.ಸಿ. ಬಸಪ್ಪನವರಿಂದ ಕ್ರಯಕ್ಕೆ ಪಡೆದಿದ್ದು ನನ್ನ ಅಣ್ಣ ಸದರಿ ಜಮೀನನ್ನು ಅನ್ಯಕ್ರಾಂತ್ಯ ಮಾಡಿಸಿರುತ್ತಾರೆ. ತನ್ನ ಅಣ್ಣ ಮೃತ ಪಟ್ಟ ನಂತರ ಮರಣಶಾಸನ ಬರೆದು ದಿ: 29.03.2014 ರಂದು ಮೃತ ಪಟ್ಟಿರುತ್ತಾರೆ. ಅದರಂತೆ ಸದರಿ ಸ್ವತ್ತು ತನ್ನ ಹೆಸರಿಗೆ ಖಾತೆಯಾಗಿ ಪಹಣಿ ಪತ್ರಿಕೆಯು ಸಹ ಬಂದಿರುತ್ತದೆ. ದಿನಾಂಕ: 12.05.2015 ರಂದು ಎದುರುದಾರರ ಕಚೇರಿಗೆ ಪೂರಕ ದಾಖಲೆಗಳನ್ನು ಸಲ್ಲಿಸಿ ಗಣಕೀಕೃತ ಖಾತೆಗೆ (ಇ ಖಾತೆಗೆ) ಮಾಡಿಸಿಕೊಡುವಂತೆ ಅರ್ಜಿ ಸಲ್ಲಿಸಿದ್ದು ಆದರೆ ಎದುರುದಾರರು ಅರ್ಜಿ ಸಲ್ಲಿಸಿ ಒಂದು ವರ್ಷ 9 ತಿಂಗಲೂ ಕಳೆದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಈ ಬಗ್ಗೆ ಎದುರುದಾರರನ್ನು ಕೇಳಲಾಗಿ ಯಾವುದೇ ಸರಿಯಾದ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಅದೇ ರೀತಿ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ನೀಡಲಾದ ಅರ್ಜಿಗೆ ಸಂಬಂಧಪಟ್ಟಂತೆ ದಿ: 17-3-2016 ರಂದು ಸದರಿ ಸ್ವತ್ತನ್ನು ಅಳತೆ ಮಡಲು ಸಭೆಯ ನಿರ್ಣಯದಂತೆ ಹಣ ಪಾವತಿಸಲು ಕಛೇರಿಗೆ ಕಳುಹಿಕೊಟ್ಟಿದ್ದು ಈ ಬಗ್ಗೆ ಅಳಗೆ ಕೆಲಸ ಪೂರೈಸಿ ನೀಡಿರುವ ಹಂಬರಹವನ್ನು ಸ್ವತಃ ಪಂಚಾಯತಿಗೆ ಸಲ್ಲಿಸಿರುತ್ತಾರೆ. ಶ್ರೀ ಕೆಂಪರಾಜು ಮಾಜಿ ಅಧ್ಯಕ್ಷರು, ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಮಗ ತಮ್ಮ ಕಚೇರಿಗೆ ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ ಜಮೀನನ್ನು ಅಕ್ರಮವಾಗಿ ಪೋಡಿ ಮಾಡಿಸಿಕೊಂಡಿರುವ ಬಗ್ಗೆ ದೂರನ್ನು ನೀಡಿ ಈ ಸ್ವತ್ತಿನಲ್ಲಿ ಖಾತಾ ನೋಂದಣಿ ಮಾಡದಂತೆ ದಾನ ಪತ್ರದ ನಕಲನ್ನು ಲಗತ್ತಿಸಿ ತಕರಾರು ನೀಡಿರುತ್ತಾರೆ. ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ 5 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ 2 ಗುಂಟೆ ಜಾಗನ್ನು ಪೋಡಿ ಮಾಡಿಸಿಕೊಂಡು ಖಾತ ಮಾಡಿಕೊಡುವಂತೆ ಕೋರಿರುವ ಬಗ್ಗೆ ದಿ: 07.12.2016 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಅರ್ಜಿಯನ್ನು ಪರಿಗಣಿಸಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪತ್ರದಲ್ಲಿ ಅಕ್ರಮವಾಗಿ ಪೋಡಿ ಮಾಡಿಕೊಂಡಿರುವುದನ್ನು ರದ್ದು ಪಡಿಸಿ, ಶಿಕ್ಷಣ ಇಲಾಖೆಗೆ ಸೇರಿದ ಎಲ್ಲಾ ಆಸ್ತಿಯು ಸರಿಯಾಗುವವರೆಗೆ ಖಾತಾ ವಗ್ಯೆರೆ ಮಾಡಬಾರದು ಎಂದು ದೂರುದಾರರ ಈ ಸ್ವತ್ತಿನ ಖಾತೆ ನೋಂದಣಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ನಿರ್ಣಯಿಸಲಾಗಿರುತ್ತದೆ ಎಂದು ಹೇಳಿದ್ದಾರೆ. ಈ ಅಂಶವನ್ನು ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸುಳ್ಳು ಎಂಬುದಾಗಿ ಅಲ್ಲಗಳೆದಿದ್ದಾರೆ.

ದೂರುದಾರರ ಮತ್ತು ಎದುರುದಾರರು ಹಾಜರು ಪಡಿಸಲಾದ ದಾಖಲೆಗಳನ್ನು ಪರಿಶೀಲಿಸಲಾಗಿ ಮಳವಳ್ಳಿ

ತಾಲ್ಲೂಕು ಮಾಗನೂರು ಗ್ರಾಮದ ಸರ್ವೆ ನಂ. 198/2 ಬಿ, 84 ಗುಂಟೆ ಜಮೀನು ಮೂಲತಃ ದೂರುದಾರರ ಅಣ್ಣ ಎಂ.ಬಿ. ಜಗದೀಶ್‌ರವರು ದಿ: 15-05-1993 ರಂದು ಎಂ.ಬಿ. ಮಹದೇವಪ್ಪ ಬಿನ್ ಲೇಟ್ ಎಂ.ಸಿ. ಬಸಪ್ಪನವರಿಂದ ಕ್ರಯಕ್ಕೆ ಪಡೆದಿರುವುದು ಕ್ರಯ ಪತ್ರವನ್ನು ಪರಿಶೀಲಿಸಲಾಗಿ ಕಂಡುಬಂದಿರುತ್ತದೆ. ಅನಂತರ ಸದರಿ ಜಮೀನನ್ನು ಅನ್ಯಕ್ರಾಂತ್ಯ ಮಾಡಿ ದೂರುದಾರರ ಹೆಸರಿಗೆ ಅವರ ಅಣ್ಣ ವಿಲ್ ಮೂಲಕ ಬರೆದುಕೊಟ್ಟಿದ್ದು ಈ ಬಗ್ಗೆ ಕಂಧಾಯ ಇಲಾಖೆಯ ದಾಖಲೆಗಳು ಸಹ ಬಂದಿರುತ್ತವೆ. ಅನಂತರ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಗಣಕೀಕೃತ ಖಾತಾ ಮಾಡಿಕೊಡುವಂತೆ ಕೋರಿ ಎದುರುದಾರರ ಕಚೇರಿಗೆ ದಿ:12-5-2015 ರಂದು ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಸುಮಾರು 2 ವರ್ಷ ಕಾಲಹರಣ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ದೂರುದಾರರು ಹಾಜರು ಪಡಿಸಲಾದ ಎಲ್ಲಾ ದಾಖಲೆಗಳನ್ನ ಪರಿಶೀಲಿಸಲಾಗಿ ಸದರಿ ಸ್ವತ್ತು ದೂರುದಾರರ ಹಕ್ಕು ಮತ್ತು ಮಾಲಿಕತ್ವಕ್ಕೊಳಪಟ್ಟಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಕೆಂಪರಾಜು ಮಾಜಿ ಅಧ್ಯಕ್ಷರು ಸದರಿ ಜಮೀನಿನಲ್ಲಿ ದಾನವಾಗಿ 5 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ 2 ಗುಂಟೆ ಜಾಗವನ್ನು ಪೋಡಿ ಮಾಡಿಸಿಕೊಂಡು ಖಾತೆ ನೋಂದಾಯಿಸಿಕೊಡುವಂತೆ ಕೋರಿರುವ ಬಗ್ಗೆ ದಿ: 7.2.2016 ರಂದು ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿ ದೂರುದಾರರ ಈ ಖಾತೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ಹೇಳಿದ್ದಾರೆ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದೂರುದಾರರು ಹಾಜರು ಪಡಿಸಲಾದ ಎಲ್ಲಾ ದಾಖಲೆಗಳು ಅವರ ನಿಲುವಿಗೆ ಪೂರಕವಾಗಿರುವುದರಿಂದ ಎದುರುದಾರರು ಸದರಿ ಜಮೀನಿನ ಇ ಖಾತವನ್ನು ಮಾಡಿಸಿಕೊಡುವುದು ಅವರ ಕರ್ತವ್ಯವಾಗಿರುತ್ತದೆ. ಆದರೆ ಎದುರುದಾರರು ದೂರುದಾರರ ಅರ್ಜಿಗೆ ಯಾವುದೇ ಕ್ರಮ ಕೈಗೊಳ್ಳದೇ ಸುಮಾರು 2 ವರ್ಷಗಳ ಕಾಲ ವಿಳಂಬ ಮಾಡಿ ಈವರೆವಿಗೂ ಸಹ ಯಾವುದೇ ಇ ಖಾತ ಮಾಡಿಕೊಡದೇ ತೊಂದರೆ ನೀಡಿ, ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಮಹೇಶ್ ಬಾಬು.ಎಂ.ಪಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತು ಶ್ರೀ ಮಹದೇವು.ಎಂ ಕಾರ್ಯದರ್ಶಿ, ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ ನಿಯಮ 3(1)(i) ಮತ್ತು (ii) ರ ಅನ್ವಯ ದುರ್ನಡತೆಯಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು 1957 ನಿಯಮ 14 (ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/192/ಗ್ರಾಪಂಕಾ/2018 ಬೆಂಗಳೂರು, ದಿನಾಂಕ:19-04-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮಹೇಶ್ ಬಾಬು.ಎಂ.ಪಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತು ಶ್ರೀ ಮಹದೇವು.ಎಂ ಕಾರ್ಯದರ್ಶಿ, ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ (ನಡವಳಿ) ನಿಯಮ 1966 3(1)(i) ಮತ್ತು (ii) ರನ್ವಯ "ದುರ್ನಡತೆ" ಎಸಗಿರುವುದು ಸಾಬೀತಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು 1957 ರ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

21/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಪುಟ 1 ರಿಂದ 102 ರವರೆಗೆ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ಜಿಲ್ಲೆ
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ
6. ಶ್ರೀ ಮಹೇಶ್ ಬಾಬು.ಎಂ.ಪಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ
7. ಶ್ರೀ ಮಹದೇವು.ಎಂ ಕಾರ್ಯದರ್ಶಿ, ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ
8. ಗಣಕಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.